

ಆ ಮನೆ ಕಟ್ಸಿ ವರ್ಷಾಗಿತ್ತು, ಆಗ ಇವ್ನು ಉಟ್ಟಿದ ಅಂದ್ನಲ್ಲಾ, ಅದೇ ಟೇಮಿಗೆ ಸರಿಯಾಗಿ ಆ ಮನೆಗೆ ಆ ಕಡೆ, ಈ ಕಡೆ ಎಲ್ಡು ಮನೆ ಆದ್ವು. ಈ ಮನೆಗೆ ನಡ್ಲು ಮನೆ ಅಂತ್ಲೂ ಈ ಮಗೀಗೆ ನಡ್ಲು ಮನೆ ಮಗ ಅಂತ್ಲೂ ಒಟ್ಗೆ ಎಸ್ರಿಟ್ರು ಅನ್ನಿ. ನಾ ನೋಡಿದಂಗೆ ಮೂರೂ ಮನೆವ್ರಿಗೂ ಏನು ಸಂಬಂಧ ಇರ್ಲಿಲ್ಲ. ಆದ್ರೂ ಎಂಗಿದ್ರು ಗೊತ್ತ? ಅವ್ರ ಮನೇಲಿ ಇವ್ರು. ಇವ್ರ ಮನೇಲಿ ಅವ್ರು ತಿನ್ಕಂಡು, ಉಂಡ್ಕಂಡು, ಸಂಜೆ ಆಯ್ತಂದ್ರೆ ಆಟ ಆಡ್ಕಂಡು ಮಾತಾಡ್ಕಂಡು, ನಕ್ಕಂಡು... ಏನೇಳ್ಲಿ ಆ ಸಂಬ್ರಮ್ವ. ವಿಷ್ಯ ಎಂತದೇ ಆದ್ರೂ ಜಗ್ಳ ಆಗ್ತಿರ್ಲಿಲ್ಲ. ಒಂದ್ಸಾರಿ ಇಂಗೆ ಎಲ್ಲಾ ಮಕ್ಳು ಆಡ್ಕೋತಾ ಇದ್ವು. ಮೂರು ಮನೆಯಿಂದ ಎಂಟತ್ತು ಮಕ್ಳು ಇದ್ವೇನೋ, ಇವಾಗ್ನಂಗೆ ಲೆಕ್ಕ ಇಡಕೆ ಆದೀತ? ಈ ಎಡ್ಗಡೆ ಮನೆ ಮಗ ಒಂದು ಆಡ್ಕೋತ ಆಡ್ಕೋತಾ ಓಗಿ ಬಲ್ಗಡೆ ಮನೆ ರಂಗೋಲಿ ಮೇಲೇ ವಂದ ಮಾಡ್ತು, ಅದನ್ನೋಡಿ ಎಡ್ಗಡೆ ಮನೆ ಮಗ ಒಂದೋಗಿ ಬಲ್ಗಡೆ ಮನೆ ರಂಗೋಲಿ ಮೇಲೆ ವಂದ ಮಾಡ್ತು. ಅಂಗೇ ಆಡ್ಕೋತಾ ಆಡ್ಕೋತಾ ಎಲ್ಡೂ ಮನೆ ಮಕ್ಳು ಸೇರಿ ನಡ್ಲು ಮನೆ ರಂಗೋಲಿ ಮೇಲೆ ಇನ್ನೊಂತರ ರಂಗೋಲಿ ಒಯ್ಕೋತ ನೀತಿದ್ವು. ನಾನನ್ಕಂಡೇ, ಇವತ್ತು ಜಗ್ಳ ಗ್ಯಾರೆಂಟಿ ಅಂತ. ಆದ್ರೆ ಏನಾತೇಳಿ? ಮೂರೂ ಮನೆ ಜನ್ವೂ ಬಂದು ಇದ್ನೆಲ್ಲಾ ನೋಡಿ ಒಟ್ಟೆ ಇಡ್ಕಂಡು ಬಿದ್ದೂ